E.O-580970

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ಸಂಖ್ಯೆ:ಕವಿಪ್ರನಿನಿ/ಬಿ118/48805/23-24

KPTCL

ನಿಗಮ ಕಾರ್ಯಾಲಯ
ಕಾವೇರಿ ಭವನ,
ಬೆಂಗಳೂರು-560009
ದಿನಾಂಕ: 28 NOV 2023

**ಸುತ್ತೋಲೆ**

ವಿಷಯ: ನ್ಯಾಯಾಲಯ ಪ್ರಕರಣಗಳ ನಿರ್ವಹಣೆ ಬಗ್ಗೆ.

ಉಲ್ಲೇಖ:
1) ಸರ್ಕಾರದ ಮುಖ್ಯ ಕಾರ್ಯದರ್ಶಿ ರವರ ಸುತ್ತೋಲೆ ಮುಕಾ/6640910/2023 ದಿನಾಂಕ:09.10.2023
2) ಈ ಕಛೇರಿ ಪತ್ರ ಸಂಖ್ಯೆಕವಿಪ್ರನಿನಿ/ಬಿ15/86150/18-19 ದಿನಾಂಕ: 11/9/2018
3) ಈ ಕಛೇರಿ ಪತ್ರ ಸಂಖ್ಯೆ: ಕವಿಪ್ರನಿನಿ/ಬಿ118/14564/20-21 ದಿನಾಂಕ: 12/04/2021

*****

ಮಾನ್ಯ ಸರ್ವೋಚ್ಛ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ (ಸಿವಿಲ್) ಸಂಖ್ಯೆ: 932/2022 (ಬಿಹಾರ್ ರಾಜ್ಯ ಸರ್ಕಾರಿ ಕರ್ಮಚಾರಿ ಮಹಾ ಸಂಘ ವಿರುದ್ಧ ಭಾರತ ಸರ್ಕಾರ) ಪ್ರಕರಣದಲ್ಲಿ ದಿ:03-10-2023 ರಂದು ಮುದ್ರಿತ ನಡವಳಿಯಲ್ಲಿ ಜಾರ್ಖಂಡ್ ಸರ್ಕಾರದ ವತಿಯಿಂದ ಪ್ರಕರಣಕ್ಕೆ ಸಂಬಂಧಿಸಿದಂತೆ ಸರಿ ಸುಮಾರು ಒಂದು ವರ್ಷದಿಂದ ಸರ್ಕಾರಿ ವಕೀಲರನ್ನು ಪ್ರಾಧಿಕಾರಗೊಳಿಸುವ ಬಗ್ಗೆ ಹಾಗೂ ತನ್ಮೂಲಕ ಪ್ರತ್ಯುತ್ತರ ಹೇಳಿಕೆಯನ್ನು (Counter Affidavit) ದಾಖಲಿಸಲು ಕ್ರಮವಹಿಸಿಲ್ಲದ್ದನ್ನು ಗಂಭೀರವಾಗಿ ಪರಿಗಣಿಸಿ ಜಾರ್ಖಂಡ್ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ದಿ: 09.10.2023 ರಂದು ಮಾನ್ಯ ನ್ಯಾಯಾಲಯಕ್ಕೆ, ಖುದ್ದು ಹಾಜರಾಗಲು ಆದೇಶಿಸಿದೆ (ಪ್ರತಿ ಲಗತ್ತಿಸಿದೆ).

ಮೇಲಿನ ಮಾನ್ಯ ಸರ್ವೋಚ್ಛ ನ್ಯಾಯಾಲಯದ ಆದೇಶದ ಹಿನ್ನೆಲೆಯಲ್ಲಿ ಪ್ರಸ್ತುತ ರಾಜ್ಯದಲ್ಲಿ ಜಾರಿಗೆ ತಂದಿರುವ ಕರ್ನಾಟಕ ಸರ್ಕಾರಿ ವ್ಯಾಜ್ಯ ನಿರ್ವಹಣಾ ಅಧಿನಿಯಮ 2023 ರ ಅನ್ವಯ ಸರ್ಕಾರದ ಎಲ್ಲಾ ಇಲಾಖೆಗಳು ವ್ಯಾಜ್ಯ ನಿರ್ವಹಣೆಯನ್ನು ಅತ್ಯಂತ ಜವಾಬ್ದಾರಿಯುತವಾಗಿ ಕಾಲಮಿತಿಯಲ್ಲಿ ಮಾಡತಕ್ಕದೆಂದು ಸೂಚಿಸಿದೆ.

EE(IT-4)
24/11/23

ಮುಂದುವರೆದು, ಕವಿಪ್ರನಿನಿಗೆ ಸಂಬಂಧಪಟ್ಟಂತೆ ವಿವಿಧ ನ್ಯಾಯಾಲಯಗಳಲ್ಲಿ ದಾಖಲಾಗಿರುವ ಪ್ರಕರಣಗಳ ಬಗ್ಗೆ ಸೂಕ್ತ ಕಾಲ ಮಿತಿಯಲ್ಲಿ ಸಂಬಂಧಪಟ್ಟ ಕವಿಪ್ರನಿನಿಯ ಅಧಿಕಾರಿಗಳು ನಿಗಮದ ಪರವಾಗಿ ವಕಾಲತ್ ನಾಮಗಳನ್ನು ಸಲ್ಲಿಸುವುದು ಹಾಗೂ ಕಂಡಿಕೆವಾರು ಪ್ರತಿ ಉತ್ತರಗಳನ್ನು ಕಾನೂನು ಶಾಖೆಗೆ ಕಳುಹಿಸುವುದು (ಮಾನ್ಯ ಉಚ್ಛನ್ಯಾಯಾಲಯ ಹಾಗೂ ಮಾನ್ಯ ಸರ್ವೋಚ್ಛನ್ಯಾಯಾಲಗಳಲ್ಲಿರು ಪ್ರಕರಣಗಳಿಗೆ ಮಾತ್ರ) ನಿಗಮದ ವಕೀಲರ ಮೂಲಕ ಸಮಾಲೋಚಿಸಿ ಪ್ರತ್ಯುತ್ತರ ಹೇಳಿಕೆ/ಪ್ರತಿವಾದದ ಹೇಳಿಕೆ (Counter Affidavit) ಯನ್ನು ಮಾನ್ಯ ನ್ಯಾಯಾಲಯ/ನ್ಯಾಯ ಮಂಡಳಿಗಳಲ್ಲಿ ದಾಖಲಿಸಲು ತುರ್ತು ಕಾಲಮಿತಿಯಲ್ಲಿ ಕ್ರಮವಹಿಸತಕ್ಕದ್ದು.

C.O.No: 562271

# ಕರ್ನಾಟಕ ಸರ್ಕಾರ

ಸಂಖ್ಯೆ: ಎನರ್ಜಿ 273 ಸಿಓಆರ್‌ಡಿ 2023

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:03.11.2023.

MD
04 NOV 2023
KPTCL

**ಇವರಿಂದ:-**

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಇಂಧನ ಇಲಾಖೆ,
ಬೆಂಗಳೂರು-1.

**ಇವರಿಗೆ:-**

1. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕಾವೇರಿ ಭವನ, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಬೆಂಗಳೂರು.
3. ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ, ಬೆಂಗಳೂರು.
4. ವ್ಯವಸ್ಥಾಪಕ ನಿರ್ದೇಶಕರು, ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ, ಕಲಬುರಗಿ.
5. ವ್ಯವಸ್ಥಾಪಕ ನಿರ್ದೇಶಕರು, ಮಂಗಳೂರು ವಿದ್ಯುತ್ ಸರಬರಾಜು ಕಂಪನಿ, ಮಂಗಳೂರು.
6. ವ್ಯವಸ್ಥಾಪಕ ನಿರ್ದೇಶಕರು, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿ, ಮೈಸೂರು.
7. ವ್ಯವಸ್ಥಾಪಕನಿರ್ದೇಶಕರು, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ, ಹುಬ್ಬಳ್ಳಿ.
8. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು.
9. ವ್ಯವಸ್ಥಾಪಕ ನಿರ್ದೇಶಕರು, ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್, ಬೆಂಗಳೂರು.
10. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಕಾರ್ಖಾನೆ, ಮೈಸೂರು ರಸ್ತೆ, ಬಾಪೂಜಿ ನಗರ, ಬೆಂಗಳೂರು.
11. ವ್ಯವಸ್ಥಾಪಕ ನಿರ್ದೇಶಕರು, ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಲಿಮಿಟೆಡ್, ತುಮಕೂರು ಮೈನ್ ರಸ್ತೆ, ಯಶವಂತಪುರ, ಬೆಂಗಳೂರು.
12. ಮುಖ್ಯ ವಿದ್ಯುತ್ ಪರಿವೀಕ್ಷಣಾಲಯ, ವಿದ್ಯುತ್ ಪರಿವೀಕ್ಷಣಾಲಯ, ಕೇಂದ್ರ ಕಛೇರಿ, ಬೆಂಗಳೂರು.
13. ಕಾರ್ಯದರ್ಶಿ, ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ, ಬೆಂಗಳೂರು.

**ಮಾನ್ಯರೇ,**

ವಿಷಯ: ನ್ಯಾಯಾಲಯ ಪ್ರಕರಣಗಳ ನಿರ್ವಹಣೆ ಬಗ್ಗೆ.
ಉಲ್ಲೇಖ: ಸರ್ಕಾರದ ಮುಖ್ಯ ಕಾರ್ಯದರ್ಶಿ ಇವರ ಸುತ್ತೋಲೆ ಸಂಖ್ಯೆ: ಮುಕಾ / 6640910 / 2023, ದಿನಾಂಕ:19.10.2023.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಮುಖ್ಯ ಕಾರ್ಯದರ್ಶಿಯವರ ಸುತ್ತೋಲೆಯಲ್ಲಿ ನೀಡಿರುವ ನಿರ್ದೇಶನದಂತೆ ಕ್ರಮವಹಿಸಲು ಹಾಗೂ ನ್ಯಾಯಾಲಯ ಪ್ರಕರಣ ನಿರ್ವಹಿಸುವಲ್ಲಿ ಯಾವುದೇ ವಿಳಂಬ ಮಾಡಿದಲ್ಲಿ ಸಂಬಂಧಿಸಿದ ಅಧಿಕಾರಿಗಳನ್ನು ಜವಾಬ್ದಾರರನ್ನಾಗಿಸಿ, ಸೂಕ್ತ ನಿಯಮ ಬದ್ಧ ಕ್ರಮ ಜರುಗಿಸಲಾಗುವುದು ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಆದ್ದರಿಂದ, ನ್ಯಾಯಾಲಯ ಪ್ರಕರಣವನ್ನು ವಿಳಂಬ ಮಾಡದೇ ನಿರ್ವಹಿಸುವಂತೆ ತಮ್ಮನ್ನು ಕೋರಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ವಿಶ್ವಾಸಿ,

(ವಿನೋದ್ ಕುಮಾರ್ ಡಿ.ಎಂ)
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ.

LEGAL SECTION K.P.T.C.L. BANGALORE
8 NOV

(ಆಡಳಿತ & ಮಾ.ಸಂ)

ಉತ್ತರವು

ಕರ್ನಾಟಕ ಸರ್ಕಾರ

**ಸಂಖ್ಯೆ**: ಮುಕಾ/ / 2023
6640310

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ
ಬೆಂಗಳೂರು, ದಿ: 09.10.2023

## ಸುತ್ತೋಲೆ

ವಿಷಯ: ನ್ಯಾಯಾಲಯ ಪ್ರಕರಣಗಳ ನಿರ್ವಹಣೆ ಬಗ್ಗೆ.

************

ಮಾನ್ಯ ಸರ್ವೋಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ (ಸಿವಿಲ್) ಸಂಖ್ಯೆ: 932/2022 (ಬಿಹಾರ್ ರಾಜ್ಯ ಸರ್ಕಾರಿ ಕರ್ಮಚಾರಿ ಮಹಾ ಸಂಘ ವಿರುದ್ಧ ಭಾರತ ಸರ್ಕಾರ ) ಪ್ರಕರಣದಲ್ಲಿ ದಿ: 03-10-2023 ರಂದು ಮುದ್ರಿತ ನಡವಳಿಯಲ್ಲಿ ಜಾರ್ಖಂಡ್ ಸರ್ಕಾರದ ವತಿಯಿಂದ ಪ್ರಕರಣಕ್ಕೆ ಸಂಬಂಧಿಸಿದಂತೆ ಸರಿ ಸುಮಾರು ಒಂದು ವರ್ಷದಿಂದ ಸರ್ಕಾರಿ ವಕೀಲರನ್ನು ಪ್ರಾಧಿಕಾರಗೊಳಿಸುವ ಬಗ್ಗೆ ಹಾಗೂ ತನ್ಮೂಲಕ ಪ್ರತ್ಯುತ್ತರ ಹೇಳಿಕೆಯನ್ನು (Counter Affidavit) ದಾಖಲಿಸಲು ಕ್ರಮವಹಿಸಿಲ್ಲದ್ದನ್ನು ಗಂಭೀರವಾಗಿ ಪರಿಗಣಿಸಿ ಜಾರ್ಖಂಡ್ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ದಿ: 09-10-2023 ರಂದು ಮಾನ್ಯ ನ್ಯಾಯಾಲಯಕ್ಕೆ ಖುದ್ದು ಹಾಜರಾಗಲು ಆದೇಶಿಸಿದೆ (ಪ್ರತಿ ಲಗತ್ತಿಸಿದೆ).

ಮೇಲಿನ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದ ಹಿನ್ನೆಲೆಯಲ್ಲಿ ಪ್ರಸ್ತುತ ರಾಜ್ಯದಲ್ಲಿ ಜಾರಿಗೆ ತಂದಿರುವ ಕರ್ನಾಟಕ ಸರ್ಕಾರಿ ವ್ಯಾಜ್ಯ ನಿರ್ವಹಣಾ ಅಧಿನಿಯಮ, 2023 ರ ಅನ್ವಯ ಸರ್ಕಾರದ ಎಲ್ಲಾ ಇಲಾಖೆಗಳು **ವ್ಯಾಜ್ಯ ನಿರ್ವಹಣೆಯನ್ನು ಅತ್ಯಂತ ಜವಾಬ್ದಾರಿಯುತವಾಗಿ, ಕಾಲಮಿತಿಯಲ್ಲಿ** ಮಾಡತಕ್ಕದೆಂದು ಸೂಚಿಸಿದೆ.

ಮಾನ್ಯ ಉಚ್ಚ ನ್ಯಾಯಾಲಯ, ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿ/ಕೇಂದ್ರ ಆಡಳಿತ ನ್ಯಾಯ ಮಂಡಳಿಗಳ ಸಂಬಂಧ, ನ್ಯಾಯಾಲಯ ಪ್ರಕರಣಗಳ ನಿರ್ವಹಣಾ ವ್ಯವಸ್ಥೆ (CCMS) ತಂತ್ರಾಂಶದಲ್ಲಿ ಸ್ವೀಕೃತವಾಗುವ ಅರ್ಜಿಗಳ ಆಧಾರದಲ್ಲಿ ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಪ್ರಕರಣದಲ್ಲಿ ಅರ್ಜಿ ದಾಖಲಿತವಾದ ಮಾಹಿತಿ ಲಭ್ಯವಾದ **ತಕ್ಷಣವೇ** ಸರ್ಕಾರದ ಪರವಾಗಿ ನ್ಯಾಯವಾದಿಯನ್ನು (Counsel) ಪ್ರಾಧಿಕಾರತ್ವಗೊಳಿಸುವ ಸರ್ಕಾರದ ಆದೇಶ; ವಕಾಲತ್ ನಾಮಗಳನ್ನು ಸಿದ್ಧಪಡಿಸಲು ಆಯಾ ಇಲಾಖೆಗಳ ಮುಖ್ಯಸ್ಥರು ಕಡತವನ್ನು ಕಾನೂನು ಕೋಶದ ಮುಖ್ಯಸ್ಥರಿಗೆ ಕಳುಹಿಸತಕ್ಕದ್ದು. ನಂತರದಲ್ಲಿ ಕಂಡಿಕೆವಾರು ಪರಾವನ್ನು ಸಿದ್ಧಪಡಿಸಿ ಸರ್ಕಾರಿ ವಕೀಲರೊಂದಿಗೆ ಸಮಾಲೋಚಿಸಿ, ಪ್ರತ್ಯುತ್ತರ ಹೇಳಿಕೆ/ಪ್ರತಿವಾದದ ಹೇಳಿಕೆ (Counter Affidavit)

ಯನ್ನು ಮಾನ್ಯ ನ್ಯಾಯಾಲಯ/ ನ್ಯಾಯ ಮಂಡಳಿಗಳಲ್ಲಿ ದಾಖಲಿಸಲು **ತುರ್ತು ಕಾಲಮಿತಿಯಲ್ಲಿ"** ಕ್ರಮವಹಿಸತಕ್ಕದ್ದು.

ಮೇಲಿನಂತೆ ನ್ಯಾಯಾಲಯ ಪ್ರಕರಣ ನಿರ್ವಹಿಸುವಲ್ಲಿ ಯಾವುದೇ ವಿಳಂಬ ಮಾಡಿದಲ್ಲಿ ಸಂಬಂಧಿಸಿದ ಅಧಿಕಾರಿಗಳನ್ನು ಜವಾಬ್ದಾರರನ್ನಾಗಿಸಿ, ಸೂಕ್ತ ನಿಯಮ ಬದ್ಧ ಕ್ರಮ ಜರುಗಿಸಲಾಗುವುದು.

(ವಂದಿತಾ ಶರ್ಮಾ)
ಸರ್ಕಾರದ ಮುಖ್ಯ ಕಾರ್ಯದರ್ಶಿ

**ಇವರಿಗೆ**:

1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು ಕಾರ್ಯದರ್ಶಿಗಳು
2. ಎಲ್ಲಾ ಕ್ಷೇತ್ರ ಇಲಾಖೆಗಳ ಮುಖ್ಯಸ್ಥರು.(ಆಯಾ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳ /ಕಾರ್ಯದರ್ಶಿಗಳ ಮೂಲಕ)
3. ಎಲ್ಲಾ ಜಿಲ್ಲಾಧಿಕಾರಿಗಳು/ಜಿಲ್ಲಾ ಪಂಚಾಯತ್ ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
4. ಎಲ್ಲಾ ಕಾನೂನು ಇಲಾಖೆಗಳ ಕಾನೂನು ಕೋಶದ ಮುಖ್ಯಸ್ಥರು
5. ನಿವಾಸಿ ಆಯುಕ್ತರು, ಕರ್ನಾಟಕ ಭವನ, ಕೌಟಿಲ್ಯ ಮಾರ್ಗ, ಚಾಣಕ್ಯಪುರಿ, ನವದೆಹಲಿ

**ಪ್ರತಿ:**

ಅಡ್ವೋಕೇಟ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ ಕಟ್ಟಡ, ಅಂಬೇಡ್ಕರ್ ವೀಧಿ, ಬೆಂಗಳೂರು-560 001

ITEM NO.58 COURT NO.12 SECTION X

S U P R E M E C O U R T O F I N D I A
RECORD OF PROCEEDINGS

Writ Petition(s)(Civil) No(s). 932/2022

BIHAR STATE ARDH SARKARI ARAJPATI
KARAMCHARI MAHA SANGH & ORS. Petitioner(s)

VERSUS

UNION OF INDIA & ORS. Respondent(s)

(IA No. 158212/2022 - APPROPRIATE ORDERS/DIRECTIONS AND IA No. 34508/2023 - EXEMPTION FROM FILING O.T.)

Date : 03-10-2023 This matter was called on for hearing today.

CORAM :
HON'BLE MR. JUSTICE VIKRAM NATH
HON'BLE MR. JUSTICE RAJESH BINDAL

For Petitioner(s) Mr. Aman Mohit Hingorani, AOR
Mr. Himanshu Yadav, Adv.
Mr. Naseem Ahmed, Adv.

For Respondent(s) Mr. Vikramjit Banerjee, ASG
Mr. Piyush Beriwal, Adv.
Ms. Nidhi Khanna, Adv.
Ms. Chinmayee Chandra, Adv.
Mr. Rajesh Kumar Singh, Adv.
Mr. A.K. Sharma, AOR
Mr. Prashant Rawat, Adv.

Mr. Abhinav Mukerji, AOR
Mrs. Bihu Sharma, Adv.
Ms. Pratishtha Vij, Adv.
Mr. Mohit Prasad, Adv.

UPON hearing the counsel the Court made the following
O R D E R

This is a matter relating to grant of wages to the employees for the last about 20 years.

Signature Not Verified
Digitally signed by
Neetu Khajuria
Date: 2023.10.03
19:15:48 IST
Reason:

Notice to the respondents was issued vide order dated 14.11.2022.

The State of Bihar has already filed its counter affidavit.

The Union of India represented through learned Additional Solicitor General, Mr. Vikramjit Banerjee, prays for and is granted a week's time to file reply affidavit.

In such a sensitive matter, the State of Jharkhand has been sleeping over it and not even concerned with engaging a counsel in this matter.

Let the Chief Secretary of the State of Jharkhand to remain present before this Court on 09.10.2023, for the reason that despite due service of notice no one has put in appearance on behalf of the State of Jharkhand.

List the matter again on 09.10.2023.

In the meantime, petitioners may file rejoinder affidavit to the counter affidavit filed by the State of Bihar.

Ms. Pallavi Langar, learned advocate, who is on the panel of the State of Jharkhand, has made a request that the Court may not summon the Chief Secretary, but we are declining the said request for the reason that the present matter has not been assigned to any counsel for the State of Jharkhand and Ms. Langar has made this statement only in good faith to defend the State of Jharkhand.

(NEETU KHAJURIA)
ASTT. REGISTRAR-cum-PS

(RANJANA SHAILEY)
COURT MASTER

o/c

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

| | | |
|---|---|---|
| ಸಂಖ್ಯೆ: ಬಿ118/14564/20-21<br>ಲಗತ್ತು: | KPTCL | ನಿಗಮ ಕಾರ್ಯಾಲಯ,<br>ಕಾವೇರಿ ಭವನ,<br>ಬೆಂಗಳೂರು-560 009.<br>☎: 080-22211898<br>Date: 12 APR 2021 |

.............................ರಂದು ರವಾನೆಯಾಗಿದೆ.

ಎಲ್ಲಾ ಮುಖ್ಯ ಅಭಿಯಂತರರು (ವಿ),
ಪ್ರಸರಣ ವಲಯ,
ಕವಿಪ್ರನಿನಿ,
ಬೆಂಗಳೂರು/ತುಮಕೂರು/ಹಾಸನ/
ಕಲಬುರಗಿ/ಮೈಸೂರು/ಬಾಗಲಕೋಟೆ.

ಮಾನ್ಯರೇ,

ವಿಷಯ: ಮೇಲ್ಮನವಿ ಸಲ್ಲಿಸಲು ವಿಳಂಬವಾಗಿ ಪ್ರಸ್ತಾವನೆಗಳು ಸಲ್ಲಿಸುತ್ತಿರುವ ಬಗ್ಗೆ.

ಉಲ್ಲೇಖ: ಈ ಕಛೇರಿ ಪತ್ರ ಸಂಖ್ಯೆ: ಕವಿಪ್ರನಿನಿ/ಬಿ15/86150/18-19 ದಿನಾಂಕ: 11.09.2018.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ, ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯ, ಬೆಂಗಳೂರು/ಧಾರವಾಡ/ಕಲಬುರಗಿ ಮತ್ತು ವಿವಿಧ ಜಿಲ್ಲೆಗಳಲ್ಲಿ ದಾಖಲಾಗುವ ಪ್ರಕರಣಗಳಲ್ಲಿ ಮಾನ್ಯ ನ್ಯಾಯಾಲಯವು ನೀಡುವ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸುವಂತಹ ಪ್ರಕರಣಗಳನ್ನು ಮುಂದಿನ ಕ್ರಮ ತೆಗೆದುಕೊಳ್ಳಲು ವಿಳಂಬವಾಗಿ ಪ್ರಸ್ತಾವನೆಗಳನ್ನು ಸಲ್ಲಿಸುತ್ತಿರುವುದು ನಿಗಮದ ಗಮನಕ್ಕೆ ಬಂದಿರುತ್ತದೆ. ಈ ಸಂಬಂಧ ಕೆಲವು ಪ್ರಕರಣಗಳಲ್ಲಿ ವಿಳಂಬವಾಗಿ ಮೇಲ್ಮನವಿ ಸಲ್ಲಿಸಿರುವುದರಿಂದ ಮಾನ್ಯ ಉಚ್ಛ ನ್ಯಾಯಾಲಯ ನಿಗಮದ ಮೇಲ್ಮನವಿಯನ್ನು ತಿರಸ್ಕರಿಸಿ ಆದೇಶ ಹೊರಡಿಸಿದೆ. ಉದಾಹರಣೆಗಾಗಿ ಮಾನ್ಯ ತಿಪಟೂರು ಮತ್ತು ತುಮಕೂರು ಕೆಳ ಹಂತದ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ದಾಖಲಿಸಿ ಇತ್ಯರ್ಥವಾದ ಕೆಲವು ಪ್ರಕರಣಗಳ ವಿವರಗಳನ್ನು ಈ ಕೆಳಕಂಡಂತೆ ಸೂಚಿಸಲಾಗಿದೆ:-

| ಕ್ರ.ಸಂ | ಪ್ರಕರಣದ ಸಂಖ್ಯೆ | ಷರಾ |
|---|---|---|
| 1 | ರಿಟ್ ಅರ್ಜಿ ಸಂಖ್ಯೆ:41512/2019 (ಮಿಸ್‌ಕೇಸ್ 10080/2014 ಆದೇಶ ದಿನಾಂಕ: 15.12.2016) | ಈ ಅರ್ಜಿಯನ್ನು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ 3 ವರ್ಷಗಳ ನಂತರ ತಡವಾಗಿ ದಾಖಲಿಸಿದ್ದರಿಂದ ವಜಾಗೊಳಿಸಿರುತ್ತಾರೆ. |
| 2 | ರಿಟ್ ಅರ್ಜಿ ಸಂಖ್ಯೆ:41510/2019 (ಮಿಸ್‌ಕೇಸ್ 10076/2014 ಆದೇಶ ದಿನಾಂಕ: 15.12.2016) | |
| 3 | ರಿಟ್ ಅರ್ಜಿ ಸಂಖ್ಯೆ:41513/2019 (ಮಿಸ್‌ಕೇಸ್ 10081/2014 ಆದೇಶ ದಿನಾಂಕ: 15.12.2016) | |

ಮುಂದುವರೆದಂತೆ, ಇಂತಹ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಛ ನ್ಯಾಯಾಲಯದ ಪ್ರಕರಣ ಸಂಖ್ಯೆ:ಎಸ್.ಪಿ.ಎಲ್ (ಸಿ) 9217/2020 663 ದಿನಗಳ ವಿಳಂಬವಾಗಿ ಪ್ರಕರಣವನ್ನು ದಾಖಲಿಸಿರುವುದನ್ನು ಗಮನಿಸಿ ಮೇಲ್ಮನವಿಯನ್ನು ತಿರಸ್ಕರಿಸಿ ವಿಳಂಬ ಮಾಡಿರುವ ಅಧಿಕಾರಿಗಳಿಂದ ರೂ. 25,000/-ಗಳನ್ನು ವಸೂಲಿ ಮಾಡಲು ಆದೇಶಿಸಿದೆ.

ಈ ಸಂಬಂಧ ಉಲ್ಲೇಖ ಪತ್ರದಲ್ಲಿ ಮಾನ್ಯ ಕೆಳ ನ್ಯಾಯಾಲಯಗಳಲ್ಲಿ ದಾಖಲಾದ ಪ್ರಕರಣಗಳ ಅನುಸರಣೆ ಮಾಡಲು ವಿವರವಾದ ಪತ್ರವನ್ನು ನಿಗಮದ ಕಛೇರಿಯಿಂದ ಬರೆದು ತಿಳಿಸಿದರೂ ಯಾವುದೇ ಕ್ರಮ ಜರುಗಿಸದಿರುವುದು ಕಂಡುಬಂದಿದೆ.

ಆದ್ದರಿಂದ, ಇನ್ನು ಮುಂದೆ ಯಾವುದೇ ಪ್ರಕರಣಗಳಲ್ಲಿ ಮೇಲ್ಮನವಿ ಸಲ್ಲಿಸುವ ಸಂದರ್ಭಗಳಲ್ಲಿ ನಿಗಧಿತ ಅವಧಿಯಲ್ಲಿ ಕೆಳ ನ್ಯಾಯಾಲಯದ ಆದೇಶ ಪಡೆದು ಮೇಲ್ಮನವಿ ಸಲ್ಲಿಸಲು ಅರ್ಹವಿದ್ದಲ್ಲಿ ವಕೀಲರಿಂದ ಅಭಿಪ್ರಾಯ ಪಡೆದು ಕೂಡಲೇ ನಿಗಮ ಕಾರ್ಯಾಲಯಕ್ಕೆ ಮುಂದಿನ ಕ್ರಮ ಜರುಗಿಸಲು ಸಲ್ಲಿಸುವುದು, ಈ ವಿಷಯದಲ್ಲಿ ಈ ರೀತಿ ಪ್ರಕರಣಗಳು ಮತ್ತೆ ಮರುಕಳಿಸದಂತೆ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೆ ಸೂಚಿಸುವುದು ಮತ್ತು ತಪ್ಪಿದಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನು ನೇರ ಹೊಣೆ ಮಾಡಿ ಶಿಸ್ತು ಕ್ರಮ ಜರುಗಿಸಲಾಗುವುದು.

ತಮ್ಮ ವಿಶ್ವಾಸಿ,

6/4/4

ನಿರ್ದೇಶಕರು (ಆ ಮತ್ತು ಮಾ.ಸಂ),

ಕವಿಪ್ರನಿನಿ.

5/4/2021

5/4/4